ಓ:ಎಸ್:ನಂ.234/2015

ಡಿ .ಡಬ್ಲ್ಯೂ- 1

ದಿಃ 09-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ವಿ ಎ ವಕೀಲರಿಂದ

(ಮಧ್ಯಂತರ ಅರ್ಜಿಗಳ ಆದೇಶದ ಮೇರೆಗೆ)

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣಿಸುತ್ತಿರುವ ಮನೆಯು ತಮ್ಮ ಮನೆ ಎಂದು ಸಾಕ್ಷಿ ಒಪ್ಪಿದ್ದರ ಮೇರೆಗೆ ನಿಪಿ-14 ಎಂದು ಗುರುತಿಸಲಾಯಿತು. ನನ್ನ ಮನೆಯ ಪೂರ್ವದ ಕಡೆ ಖಾಲಿ ನಿವೇಶನ ಇದೆ ಎಂದರೆ ಸರಿ. ನನ್ನ ಮನೆಯ ಪಶ್ಚಿಮದ ಕಡೆ ಒಂದು ಖಾಲಿ ನಿವೇಶನ ಇದೆ ಎಂದರೆ ಸರಿ. ನನ್ನ ಮನೆಯ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ನನ್ನ ಮನೆಯ ಹಿಂಬದಿಯಲ್ಲಿ ನಿವೇಶನ ಸಂಖ್ಯೆ 43ರ ಒಂದು ಸ್ವತ್ತು ಇದೆ ಎಂದರೆ ಸರಿ. ನನ್ನ ಮನೆಯ ಪಶ್ಚಿಮದ ಕಡೆ ಇರುವ ಖಾಲಿ ನಿವೇಶನ ವಾದಿಗೆ ಸೇರಿದ್ದು ಎಂದರೆ ಸರಿ. ನನ್ನ ಮನೆಯ ಪೂರ್ವದ ಕಡೆ ಇರುವ ನಿವೇಶನದ ಸಂಖ್ಯೆ 66 ಎಂದರೆ ಸಾಕ್ಷಿ ನಾನು ಮನೆ ಕಟ್ಟಿರುವ ಮನೆಯ ಸಂಖ್ಯೆ 66 ಎಂದು ನುಡಿಯುತ್ತಾರೆ. ನನ್ನ ಮನೆಯ ಪೂರ್ವದ ಕಡೆ ಇರುವ ನಿವೇಶನ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ಮನೆಯ ಪೂರ್ವದ ಕಡೆ ಖಾಲಿ ನಿವೇಶನ ಸಂಖ್ಯೆ 66 ಎಂದರೆ ಸರಿಯಲ್ಲ. ದಾವ ಸ್ವತ್ತಿನ ಪಶ್ಚಿಮದ ಕಡೆ ಇರುವ ಖಾಲಿ ನಿವೇಶನದ ಪಶ್ಚಿಮದ ಕಡೆ ಇರುವ ಮನೆ ರೇವಣ್ಣನವರಿಗೆ ಸೇರಿದ್ದು. ಗೋವಿಂದಪ್ಪನವರ ಹೆಸರಿನಲ್ಲಿ ಎರಡು ನಿವೇಶನಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮನೆಯನ್ನು ನಿವೇಶನ ಸಂಖ್ಯೆ 65 ರಲ್ಲಿ ಮನೆಯನ್ನು ಕಟ್ಟಿಸಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ನಿಯೋಗಿ ಬಂದು ದಾವ ಸ್ವತ್ತು ಮತ್ತು ನನ್ನ ಸ್ವತ್ತನ್ನು ಅಳತೆ ಮಾಡಲು ನನ್ನ ಯಾವುದೇ ತಕರಾರು ಇಲ್ಲ ಎಂದರೆ ಸರಿ. ನಾನು ನನ್ನ ಮನೆಯನ್ನು ನಿವೇಶನ ಸಂಖ್ಯೆ 65 ರಲ್ಲಿ ಕಟ್ಟಿಸಿರುತ್ತೇನೆಂದು ವಾದಿಯು ಹೇಳಿರುತ್ತಾರೆಂದರೆ ಸರಿಯಲ್ಲ. ನಾನು ಮನೆ ಕಟ್ಟಿರುವ ಪೂರ್ವದ ಕಡೆ ಇರುವ ನಿವೇಶನ ನನಗೆ ಸೇರಿದ್ದು ಎಂದರೆ ಸರಿಯಲ್ಲ. ನಾನು ಮನೆ ಕಟ್ಟಿರುವ ಪೂರ್ವದ ಕಡೆ ಎರಡು ಖಾಲಿ ನಿವೇಶನಗಳು ಇವೆ. ನನ್ನ ಮನೆಯ ಪೂರ್ವದ ಕಡೆ ಇರುವ ನಿವೇಶನದ ನಂತರ ಪೂರ್ವದ ಕಡೆ ಮಂಜಣ್ಣನವರ ಮನೆ ಬರುತ್ತದೆ ಎಂದರೆ ಸರಿ. ನಿವೇಶನ ಸಂಖ್ಯೆ 65 ರಲ್ಲಿ ನಾನು ಮನೆಯನ್ನು ಕಟ್ಟಿಸುತ್ತಿದ್ದಾಗ ಸದರಿ ಮನೆಯನ್ನು ಕಟ್ಟಬಾರದೆಂದು ತಕರಾರು ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ವಾದಿಗೆ ಸೇರಿದ ಸ್ವತ್ತನ್ನು ಲಪಾಟಯಿಸುವ ಉದ್ದೇಶದಿಂದ

ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**